# ತುಮಕೂರು ವಿಶ್ವವಿದ್ಯಾನಿಲಯ

**ಸಂಖ್ಯೆ:ತುವಿ:ಸಿಬ್ಬಂದಿ–ಇ–2959:2024/25/**1876 **ದಿನಾಂಕ:17.08.2024**

## : ಸುತ್ತೋಲೆ :

**ವಿಷಯ: ಬೋಧಕ/ಬೋಧಕೇತರ ಸಿಬ್ಬಂದಿಗಳ ಕಾರ್ಯನಿರ್ವಹಣೆ ಕುರಿತು.**

ಉಲ್ಲೇಖ:1. ವಿ.ವಿ.ಸುತ್ತೋಲೆ ಸಂಖ್ಯೆ:ತುವಿ:ಕುಸಾಕಾ:2023–24/993, ದಿನಾಂಕ:30.06.2023.
2. ವಿ.ವಿ.ಸುತ್ತೋಲೆ ಸಂಖ್ಯೆ:ತುವಿ:ಸಿಬ್ಬಂದಿ–2035:2023–24/49,ದಿನಾಂಕ:22.03.2024.
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:14.08.2024.

* * * * *

ವಿಶ್ವವಿದ್ಯಾನಿಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ನಿಗದಿತ ಸಮಯಕ್ಕೆ ಕಚೇರಿಗೆ ಹಾಜರಾಗುವಂತೆ ಈಗಾಗಲೇ ಉಲ್ಲೇಖ (1) ಮತ್ತು (2) ರ ಸುತ್ತೋಲೆಗಳಲ್ಲಿ ತಿಳಿಸಲಾಗಿದ್ದರೂ ಕೆಲ ಸಿಬ್ಬಂದಿಗಳು ತಡವಾಗಿ ಆಗಮಿಸುತ್ತಿರುವುದನ್ನು ಮತ್ತು ಪೂರ್ವಾನುಮತಿ ಪಡೆಯದೇ ರಜೆ ಮೇಲೆ ತೆರೆಳುತ್ತಿರುವುದನ್ನು ಹಾಗೂ ಬೋಧಕೇತರ ಸಿಬ್ಬಂದಿಗಳು ಕಚೇರಿ ವೇಳೆಯಲ್ಲಿ ಲಭ್ಯವಿಲ್ಲದಿರುವುದು, ಕಡತಗಳ ನಿರ್ವಹಣೆಯಲ್ಲಿ ವಿಳಂಬ ಮತ್ತು ಕಚೇರಿಯಲ್ಲಿ ಅನಗತ್ಯ ಮೊಬೈಲ್ ಬಳಸುತ್ತಿರುವುದನ್ನು ವಿಶ್ವವಿದ್ಯಾನಿಲಯವು ಗಂಭೀರವಾಗಿ ಪರಿಗಣಿಸಿದೆ.

ಕಚೇರಿಯಲ್ಲಿ ವಿಷಯ ನಿರ್ವಾಹಕರುಗಳು ಸ್ವೀಕೃತಿ ಪಡೆಯುವ ಟಪಾಲುಗಳನ್ನು ಆದ್ಯತೆಯನುಸಾರ ಆದಿನದಂದೇ ಕಡತದಲ್ಲಿ ಮಂಡಿಸಲು ತಿಳಿಸಿದೆ, ಮತ್ತು ಕಚೇರಿ ಆಗಮನದ ವೇಳೆ **ಬೆಳಿಗ್ಗೆ 10.00** ಗಂಟೆ, ನಿರ್ಗಮನ **ಸಂಜೆ 5.30** ಹಾಗೂ **ಮಧ್ಯಾಹ್ನದ ಊಟದ ಸಮಯ 1.30** ರಿಂದ **2.30** ರಂತೆ ನಿಗದಿಪಡಿಸಲಾದ ಸಮಯ ಪಾಲಿಸುವಂತೆ ಸೂಚಿಸಿದೆ.

ಮುಂದುವರೆದು, ಬೋಧಕ/ಬೋಧಕೇತರ ಸಿಬ್ಬಂದಿಗಳು ಪೂರ್ವಾನುಮೋದನೆ ಪಡೆಯದೇ ಯಾವುದೇ ರಜೆಯ ಮೇಲೆ ತೆರಳದಂತೆ, ಹಾಗೂ ಕಚೇರಿಗೆ ನಿಗದಿತ ಸಮಯಕ್ಕೆ ಹಾಜರಾಗಿ ಕಡ್ಡಾಯವಾಗಿ ಬಯೋಮೆಟ್ರಿಕ್ ಮುಖಾಂತರ ತಮ್ಮ ಹಾಜರಾತಿ ಸಲ್ಲಿಸುವಂತೆ ಸೂಚಿಸಲಾಗಿದೆ. ತಪ್ಪಿದ್ದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಕುಲಸಚಿವರು

ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

1. ಕುಲಸಚಿವರು (ಮೌಲ್ಯಮಾಪನ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಕಾರ್ಯಪಾಲಕ ಅಭಿಯಂತರರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಎಲ್ಲಾ ಮುಖ್ಯಸ್ಥರು/ಸಂಯೋಜಕರು, ಸ್ನಾತಕೋತ್ತರ ವಿಭಾಗಗಳು, ತು.ವಿ.ತು.
5. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು.
6. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು.
7. ಗ್ರಂಥಪಾಲರು, ವಿಶ್ವವಿದ್ಯಾನಿಲಯ ಗ್ರಂಥಾಲಯ, ತುಮಕೂರು.
21. ಸಂಯೋಜಕರು, ಕ್ರೀಡಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ.
8. ಮೇಲ್ವಿಚಾರಕರು, ವಿಶ್ವವಿದ್ಯಾನಿಲಯ ಅತಿಥಿಗೃಹ, ತು.ವಿ.ತು.
9. ನಿರ್ದೇಶಕರು, ಡಾ. ಅಂಬೇಡ್ಕರ್ ಅಧ್ಯಯನ ಕೇಂದ್ರ, ತು.ವಿ.ತು.
10. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಸಮಿತಿ, ತು.ವಿ.ತು.
11. ನಿರ್ದೇಶಕರು, ಸಂಶೋಧನೆ, ತುಮಕೂರು ವಿಶ್ವವಿದ್ಯಾನಿಲಯ.
12. ಸಂಯೋಜನಾಧಿಕಾರಿ, ಎನ್.ಎಸ್.ಎಸ್. ಘಟಕ, ತು.ವಿ.ತು.
13. ಎಲ್ಲಾ ವಿಭಾಗಗಳ ಉಪಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ.
14. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ, ತುಮಕೂರು ವಿಶ್ವವಿದ್ಯಾನಿಲಯ.
15. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
16. ಕಚೇರಿ ಪ್ರತಿ.

(1–15:) ತಮ್ಮ ಅಧೀನದಲ್ಲಿರುವ ಎಲ್ಲಾ ಸಿಬ್ಬಂದಿಗಳ ಗಮನಕ್ಕೆ ತರಲು ಸೂಚಿಸಿದೆ.